**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೆರಡನೆಯ ಅಧಿವೇಶನ**

# ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–9)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ರಾಜ್ಯದಲ್ಲಿ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸಲು ಒಂದು ವಿಧೇಯಕ.

ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ಪ್ರಾದೇಶಿಕ ಕಾನೂನುಗಳು'' ಎಂದರೆ, 1ನೇ ನವೆಂಬರ್ 1956ರ ನಿಕಟಪೂರ್ವದಲ್ಲಿ ಹಿಂದಿನ ಬಾಂಬೆ, ಕೂರ್ಗ್, ಹೈದರಾಬಾದ್, ಮದರಾಸು ಮತ್ತು ಮೈಸೂರು ರಾಜ್ಯಗಳಲ್ಲಿ ಜಾರಿಯಲ್ಲಿದ್ದ ಮತ್ತು ರಾಜ್ಯಗಳ ಪುನಾರಚನೆಯ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 37) 119ನೇ ಪ್ರಕರಣದ ಅಡಿಯಲ್ಲಿ ಈಗ ಕರ್ನಾಟಕ ರಾಜ್ಯದ ಭಾಗವಾಗಿರುವ ಆ ರಾಜ್ಯಗಳ ಅನುಕ್ರಮ ಪ್ರದೇಶಗಳಲ್ಲಿ ಜಾರಿಯಲ್ಲಿರುವುದು ಮುಂದುವರಿಯುತ್ತಿರುವ ಕಾನೂನುಗಳು ; ಮತ್ತು

(ಬಿ) ``ಅನುಸೂಚಿ'' ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಒಂದು ಅನುಸೂಚಿ.

**3. ಕೆಲವು ಅಧಿನಿಯಮಗಳ ಮತ್ತು ಪ್ರಾದೇಶಿಕ ಕಾನೂನುಗಳ ನಿರಸನ**.- ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯದ ಅನುಕ್ರಮ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಪ್ರಾದೇಶಿಕ ಕಾನೂನುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**4. ಉಳಿಸುವಿಕೆಗಳು.-** (1) ಈ ಅಧಿನಿಯಮದ ಮೂಲಕ ಮಾಡಲಾದ ಯಾವುದೇ ಅಧಿನಿಯಮದ ಅಥವಾ ಪ್ರಾದೇಶಿಕ ಕಾನೂನುಗಳ ನಿರಸನವು,-

(i) ಯಾವ ಇತರ ಅಧಿನಿಯಮ ಅಥವಾ ಪ್ರಾದೇಶಿಕ ಕಾನೂನುಗಳಿಗೆ ನಿರಸಿತ ಅಧಿನಿಯಮವನ್ನು ಅನ್ವಯಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಲ್ಲೇಖಿಸಲಾಗಿದೆಯೋ, ಆ ಇತರ ಯಾವುದೇ ಅಧಿನಿಯಮಕ್ಕೆ ಬಾಧಕವಾಗತಕ್ಕದ್ದಲ್ಲ ;

(ii) ಈಗಾಗಲೇ ಮಾಡಿದ ಅಥವಾ ಮಾಡಲು ಎಡೆಮಾಡಿಕೊಟ್ಟ ಯಾವುದೇ ಕಾರ್ಯದ, ಅಥವಾ ಈಗಾಗಲೇ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಸ್ವಾಮ್ಯ, ಹೊಣೆ ಅಥವಾ ದಾಯಿತ್ವದ, ಅಥವಾ ಅದರ ಸಂಬಂಧದಲ್ಲಿ ಯಾವುದೇ ಪರಿಹಾರ ಅಥವಾ ವ್ಯವಹರಣೆಯ, ಅಥವಾ ಯಾವುದೇ ಋಣ, ದಂಡನೆ, ಹೊಣೆ, ದಾಯಿತ್ವ, ಕ್ಲೇಮು ಅಥವಾ ಕೋರಿಕೆಯ ಅಥವಾ ಅದರಿಂದ ಯಾವುದೇ ಬಿಡುಗಡೆ ಅಥವಾ ವಿಮೋಚನೆಯ, ಅಥವಾ ಈಗಾಗಲೇ ನೀಡಿರುವ ನಷ್ಟಭರ್ತಿಯ, ಅಥವಾ

ಯಾವುದೇ ಹಿಂದಿನ ಕೃತ್ಯ ಅಥವಾ ಕಾರ್ಯದ ರುಜುವಾತಿನ ಮಾನ್ಯತೆ, ಅಮಾನ್ಯತೆ, ಪ್ರಭಾವ ಅಥವಾ ತತ್ಪರಿಣಾಮಗಳಿಗೆ ಬಾಧಕವಾಗತಕ್ಕದ್ದಲ್ಲ ;

(iii) ಕಾನೂನಿನ ಯಾವುದೇ ಸೂತ್ರವನ್ನು ಅಥವಾ ನಿಯಮವನ್ನು, ಅಥವಾ ಸುಸ್ಥಾಪಿತವಾದ ಅಧಿಕಾರ ವ್ಯಾಪ್ತಿಯನ್ನು, ವಾದದ, ರೂಢಿಯ ಅಥವಾ ಕಾರ್ಯವಿಧಾನದ ಸ್ವರೂಪ ಅಥವಾ ಕ್ರಮವನ್ನು, ಅಥವಾ ಈಗ ಇರುವ ಪದ್ಧತಿ, ಆಚರಣೆ, ವಿಶೇಷಾಧಿಕಾರ, ನಿರ್ಬಂಧ ವಿನಾಯಿತಿ, ಹುದ್ದೆ ಅಥವಾ ನೇಮಕವನ್ನು ಈ ಮೂಲಕ ನಿರಸಿತವಾದ ಯಾವುದೇ ಅಧಿನಿಯಮದ ಮೂಲಕ, ಅದರಲ್ಲಿ ಅಥವಾ ಇದರಿಂದ ಯಾವುದೇ ರೀತಿಯಲ್ಲಿ ಇವುಗಳನ್ನು ಅನುಕ್ರಮವಾಗಿ ಸ್ವೀರೀಕರಿಸಿರಬಹುದಾಗಿದ್ದರೂ ಅಥವಾ ಮಾನ್ಯ ಮಾಡಿರಬಹುದಾಗಿದ್ದರೂ ಅಥವಾ ಪಡೆದಿರಬಹುದಾಗಿದ್ದರೂ ಸಹ ಬಾಧಿಸತಕ್ಕದ್ದಲ್ಲ;

(iv) ಈಗ ಅಸ್ತಿತ್ವದಲ್ಲಿಲ್ಲದ ಅಥವಾ ಜಾರಿಯಲ್ಲಿಲ್ಲದ ಯಾವುದೇ ಹುದ್ದೆ, ರೂಢಿ, ದಾಯಿತ್ವ, ಹಕ್ಕು, ಸ್ವಾಮ್ಯ, ವಿಶೇಷಾಧಿಕಾರ, ನಿರ್ಬಂಧ, ವಿನಾಯಿತಿ, ಆಚರಣೆ, ಪದ್ಧತಿ, ಕಾರ್ಯವಿಧಾನ, ವಿಲೀನ ಅಥವಾ ಇತರ ವಿಷಯವನ್ನು ಅಥವಾ ಕಾರ್ಯವನ್ನು ಪುನಃ ಜಾರಿಗೊಳಿಸತಕ್ಕದ್ದಲ್ಲ ಅಥವಾ ಪೂರ್ವ ಸ್ಥಿತಿಗೆ ತರತಕ್ಕದ್ದಲ್ಲ;

(v) ಈ ಅಧಿನಿಯಮದ ಮೂಲಕ ಧನವಿನಿಯೋಗ ಅಧಿನಿಯಮಗಳ ನಿರಸನವು, ಯಾವುದೇ ಪ್ರಾಧಿಕಾರದ ಮೂಲಕ ಅವುಗಳಿಗೆ ಸಂಬಂಧಪಟ್ಟಂತೆ, ಲೆಕ್ಕ ಪರಿಶೋಧನೆ, ಪರಿಶೀಲನೆ, ಲೆಕ್ಕ ಇಡುವುದು, ತನಿಖೆ, ವಿಚಾರಣೆ ಅಥವಾ ಕೈಗೊಂಡ ಅಥವಾ ಕೈಗೊಳ್ಳಬೇಕಾಗಿರುವ ಇತರೆ ಯಾವುದೇ ಕ್ರಮವನ್ನು ಬಾಧಿಸತಕ್ಕದ್ದಲ್ಲ ಮತ್ತು ಸದರಿ ಅಧಿನಿಯಮಗಳನ್ನು ಈ ಅಧಿನಿಯಮದ ಮೂಲಕ  ನಿರಸಿತ ಗೊಳಿಸಿರದಿದ್ದರೆ ಹೇಗೋ ಹಾಗೆ, ಅಂಥ ಲೆಕ್ಕಪರಿಶೋಧನೆ, ಪರಿಶೀಲನೆ, ಲೆಕ್ಕ ಇಡುವುದು, ತನಿಖೆ, ವಿಚಾರಣೆ ಅಥವಾ ಕ್ರಮವನ್ನು ಕೈಗೊಳ್ಳಬಹುದು ಮತ್ತು/ ಅಥವಾ ಮುಂದುವರಿಸಬಹುದು;

(vi) ಆ ಅಧಿನಿಯಮಗಳಿಂದ ಅಥವಾ ಪ್ರಾದೇಶಿಕ ಕಾನೂನುಗಳಿಂದ ಪ್ರದತ್ತವಾದ ಹಕ್ಕುಗಳನ್ನು ಯಾವುದೇ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಪ್ರಶ್ನಿಸುವುದಕ್ಕಾಗಿ ಅಥವಾ ಜಾರಿಗೊಳಿಸುವುದಕ್ಕಾಗಿ ಈ ಅಧಿನಿಯಮಗಳಡಿಯಲ್ಲಿ ಅಥವಾ ಪ್ರಾದೇಶಿಕ ಕಾನೂನುಗಳಡಿಯಲ್ಲಿ ಪ್ರಾರಂಭಿಸಲಾದ ಅಥವಾ ಪ್ರಾರಂಭ ಮಾಡಬೇಕಾದ ಯಾವುದೇ ವ್ಯವಹರಣೆಗಳನ್ನು ಬಾಧಿಸತಕ್ಕದ್ದಲ್ಲ ಮತ್ತು ಆ ವ್ಯವಹರಣೆಗಳನ್ನು ಈ ಅಧಿನಿಯಮದ ಮೂಲಕ ಸದರಿ ಅಧಿನಿಯಮಗಳು ಅಥವಾ ಪ್ರಾದೇಶಿಕ ಕಾನೂನುಗಳು ನಿರಸನಗೊಂಡಿರದಿದ್ದರೆ ಹೇಗೋ ಹಾಗೇ ಸದರಿ ಅಧಿನಿಯಮಗಳ ಅನ್ವಯ ಮುಂದುವರಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

(2) ಸಂದೇಹಗಳ ನಿವಾರಣೆಗಾಗಿ, ಈ ಅಧಿನಿಯಮವು ಯಾವುದೇ ಅಧಿನಿಯಮವನ್ನು ಅಥವಾ ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸಿದ್ದು ಅದರ ಮೂಲಕವಾಗಿ, ಈ ಮುಂದಿನವುಗಳನ್ನು ಮಾಡಲಾಗಿದ್ದಲ್ಲಿ ಈ ಮುಂದಿನಂತೆ ಘೋಷಿಸಲಾಗಿದೆ. ಎಂದರೆ :-

(i) ಯಾವುದೇ ಇತರ ಅಧಿನಿಯಮದ ಅಥವಾ ಪ್ರಾದೇಶಿಕ ಕಾನೂನುಗಳ ಪಾಠವನ್ನು, ಯಾವುದೇ ವಿಷಯವನ್ನು ಸ್ಪಷ್ಟವಾಗಿ ಸೇರ್ಪಡಿಸುವ, ಬಿಟ್ಟುಬಿಡುವ, ಸೇರಿಸುವ ಅಥವಾ ಪ್ರತಿಯೋಜಿಸುವ ಮೂಲಕ ತಿದ್ದುಪಡಿ ಮಾಡಲಾಗಿದ್ದಲ್ಲಿ ನಿರಸನವು ಹಾಗೆ ನಿರಸನಗೊಂಡ ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದ ಅಧಿನಿಯಮದ ಅಥವಾ ಪ್ರಾದೇಶಿಕ ಕಾನೂನುಗಳ ಮೂಲಕ ಮಾಡಲಾದ ಅಂಥ ಯಾವುದೇ ತಿದ್ದುಪಡಿಯ ಮುಂದುವರಿಕೆಯನ್ನು ಬಾಧಿಸತಕ್ಕದ್ದಲ್ಲ.

(ii) ಸರ್ಕಾರವು ಅಥವಾ ಇತರ ಯಾವುದೇ ಪ್ರಾಧಿಕಾರವು ಕೈಗೊಂಡ ಯಾವುದೇ ಕ್ರಮವನ್ನು (ರಚಿಸಿದ ಯಾವುದೇ ನಿಯಮ ಅಥವಾ ಆದೇಶ ಅಥವಾ ಉಪವಿಧಿ ಅಥವಾ ವಿನಿಯಮ, ಅಥವಾ ನಿರ್ಧರಿಸಿದ ಅಥವಾ ಸಂಗ್ರಹಿಸಿದ ಯಾವುದೇ ತೆರಿಗೆ ಅಥವಾ ಉಪಕರ ಅಥವಾ ಫೀಜು ಸೇರಿದಂತೆ) ಮಾನ್ಯ ಮಾಡಲಾಗಿದ್ದಲ್ಲಿ ಅಥವಾ ಉಳಿಸಲಾಗಿದ್ದಲ್ಲಿ ಅಥವಾ ಒಂದು ಪ್ರಾಧಿಕಾರದ ಮುಂದಿನ ವ್ಯವಹರಣೆಗಳನ್ನು ಇನ್ನೊಂದು ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಲಾಗಿದ್ದಲ್ಲಿ ಅಥವಾ ಯಾವುದೇ ಘೋಷಣೆಯನ್ನು ಮಾಡಲಾಗಿದ್ದಲ್ಲಿ ಅಥವಾ ಯಾವುದೇ ನಿರ್ದೇಶನವನ್ನು ಕೊಡಲಾಗಿದ್ದಲ್ಲಿ, ಈ ನಿರಸನವು, ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದ ಅಂಥ ಮಾನ್ಯೀಕರಣದ ಅಥವಾ

ಉಳಿಸುವಿಕೆಯ ಅಥವಾ ವರ್ಗಾವಣೆಯ ಅಥವಾ ಘೋಷಣೆಯ ಅಥವಾ ನಿರ್ದೇಶನದ ಅಥವಾ ವಿಲಿನೀಕರಣದ ಅಥವಾ ವಿಸ್ತರಣೆಯ ಪ್ರವರ್ತನೆಯನ್ನು ಬಾಧಿಸತಕ್ಕದ್ದಲ್ಲ; ಮತ್ತು

(iii) ಯಾವುದೇ ಅಧಿನಿಯಮವನ್ನು ಅಥವಾ ಪ್ರಾದೇಶಿಕ ಕಾನೂನುಗಳನ್ನು ತಿದ್ದುಪಡಿ ಮಾಡಿದಲ್ಲಿ ಅಥವಾ ನಿರಸನಗೊಳಿಸಿದ್ದಲ್ಲಿ ಅಥವಾ ಕೆಲವು ಆನುಷಂಗಿಕ ಅಥವಾ ತಾತ್ಕಾಲಿಕ ಅಥವಾ ಉಳಿಸುವಿಕೆ ಉಪ ಬಂಧಗಳೊಡನೆ ಅಥವಾ ಅವುಗಳಿಲ್ಲದೆ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾಗಿದ್ದಲ್ಲಿ ಈ ನಿರಸನವು ಈ ಅಧಿನಿಯಮದ ಪ್ರಾರಂಭದ ಸಮಯದಲ್ಲಿ ಜಾರಿಯಲ್ಲಿದ್ದ ಅಂಥ ತಿದ್ದುಪಡಿಯ ನಿರಸನದ, ವಿಸ್ತರಣೆಯ ಅಥವಾ ಉಪಬಂಧದ ಪ್ರವರ್ತನೆಯನ್ನು ಬಾಧಿಸತಕ್ಕದ್ದಲ್ಲ.

(3) ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ III) 6, 8 ಮತ್ತು 24ನೇ ಪ್ರಕರಣದ ಉಪಬಂಧಗಳು, ಈ ಅಧಿನಿಯಮದ ಮೂಲಕ ಮಾಡಿದ ಅಧಿನಿಯಮದ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

**ಅನುಸೂಚಿ**

**ನಿರಸನವಾದ ಅಧಿನಿಯಮಗಳು**

**(2 ಮತ್ತು 3ನೇ ಪ್ರಕರಣವನ್ನು ನೋಡಿ)**

| **ಕ್ರಮ ಸಂಖ್ಯೆ** | **ವರ್ಷ** | **ಅಧಿನಿಯಮ ಸಂಖ್ಯೆ** | **ಸಂಕ್ಷಿಪ್ತ ಹೆಸರು** | **ನಿರಸನದ ವ್ಯಾಪ್ತಿ** |
|---|---|---|---|---|
| **(1)** | **(2)** | **(3)** | **(4)** | **(5)** |
| 1 | 1350ಎಫ್ | XIX | ಸ್ಟೇಟ್ ಬ್ಯಾಂಕ್ ಅಧಿನಿಯಮ, 1350ಎಫ್ (1350ಎಫ್-ರ ಹೈದರಾಬಾದ್ ಅಧಿನಿಯಮ XIX) | ಸಂಪೂರ್ಣ |
| 2 | 1381ಎಫ್ | IIIಸಿ | ವಿಸರ್ಜಿತ ವಿಶೇಷ ನ್ಯಾಯಾಧಿಕರಣ (ವಾರೆಂಟುಗಳ ಹೊರಡಿಸುವಿಕೆ) ವಿನಿಯಮ, 1359ಎಫ್ (1381ಎಫ್-ರ ಹೈದರಾಬಾದ್ ಅಧಿನಿಯಮ IIIಸಿ) | ಸಂಪೂರ್ಣ |
| 3 | 1368ಎಫ್ | LXIX | ಜಹಗೀರುಗಳ ರದ್ದಿಯಾತಿ ವಿನಿಯಮಗಳು, 1958ಎಫ್ (1368ಎಫ್-ರ ಹೈದರಾಬಾದ್ ವಿನಿಯಮ LXIX) | ಸಂಪೂರ್ಣ |
| 4 | 1871 | XXII | ಪಿಂಚಣಿ ಅಧಿನಿಯಮ, 1871 (1871ರ ಮೈಸೂರು ಅಧಿನಿಯಮ XXII) | ಸಂಪೂರ್ಣ |
| 5 | 1906 | II | ಟ್ರಾಮ್ ಮಾರ್ಗಗಳ ಅಧಿನಿಯಮ, 1906 (1906ರ ಮೈಸೂರು ಅಧಿನಿಯಮ II) | ಸಂಪೂರ್ಣ |
| 6 | 1932 | XXII | ಮರುಮಖ್ಖಾತೆಯಂ ಅಧಿನಿಯಮ, 1932 (1932ರ ಮದ್ರಾಸ್ ಅಧಿನಿಯಮ XXII) | ಸಂಪೂರ್ಣ |
| 7 | 1933 | X | ಹಿಂದೂ ಕಾನೂನುಗಳ ಮಹಿಳೆಯರ ಹಕ್ಕುಗಳ ಅಧಿನಿಯಮ, 1933 (1933ರ ಮೈಸೂರು ಅಧಿನಿಯಮ X) | ಸಂಪೂರ್ಣ |
| 8 | 1933 | XXI | ನಂಬೂದರಿ ಅಧಿನಿಯಮ, 1932 (1933ರ ಮದ್ರಾಸ್ ಅಧಿನಿಯಮ XXI) | ಸಂಪೂರ್ಣ |
| 9 | 1938 | IV | ಬಾಂಬೆ ತಾತ್ಕಾಲಿಕ ತೆರಿಗೆಗಳ ಸಂಗ್ರಹಣೆ ಅಧಿನಿಯಮ, 1938 (1938ರ ಬಾಂಬೆ ಅಧಿನಿಯಮ IV) | ಸಂಪೂರ್ಣ |
| 10 | 1939 | XIV | ಸ್ವತ್ತುಗಳ ವರ್ಗಾವಣೆ ಮತ್ತು ಭಾರತೀಯ ನೋಂದಣಿ (ಬಾಂಬೆ ತಿದ್ದುಪಡಿ) ಅಧಿನಿಯಮ, 1939 (1939ರ ಬಾಂಬೆ ಅಧಿನಿಯಮ XIV) | ಸಂಪೂರ್ಣ |

| | | | | |
|---|---|---|---|---|
| 11 | 1943 | I | ಕುಚ್ಚಿ ಮೆಮನ್‌ಗಳ ಅಧಿನಿಯಮ, 1943 (1943ರ ಮೈಸೂರು ಅಧಿನಿಯಮ I) | ಸಂಪೂರ್ಣ |
| 12 | 1947 | V | ದೇವಾಲಯ ಪ್ರವೇಶ ಅಧಿಕೃತಗೊಳಿಸುವಿಕೆ ಅಧಿನಿಯಮ, 1947 (1947ರ ಮದ್ರಾಸ್ ಅಧಿನಿಯಮ V) | ಸಂಪೂರ್ಣ |
| 13 | 1949 | VIII | ಕಿರುಕುಳಕಾರಿ ವ್ಯಾಜ್ಯ ಅಧಿನಿಯಮ, 1949 (1949ರ ಮದ್ರಾಸ್ ಅಧಿನಿಯಮ VIII) | ಸಂಪೂರ್ಣ |
| 14 | 1949 | XXX | ಔಷಧ (ನಿಯಂತ್ರಣ) ಅಧಿನಿಯಮ, 1949 (1949ರ ಮದ್ರಾಸ್ ಅಧಿನಿಯಮ XXX) | ಸಂಪೂರ್ಣ |
| 15 | 1950 | V | ಔಷಧ (ನಿಯಂತ್ರಣ) ಅಧಿನಿಯಮ, 1950 (1950ರ ಮೈಸೂರು ಅಧಿನಿಯಮ V) | ಸಂಪೂರ್ಣ |
| 16 | 1951 | XXXII | ಮೈಸೂರು ಸ್ವತ್ತುಗಳ ವರ್ಗಾವಣೆ (ಕೃಷಿ ಭೂಮಿಯ ವಿಸ್ತರಣೆ) ಅಧಿನಿಯಮ, 1951 (1951ರ ಮೈಸೂರು ಅಧಿನಿಯಮ XXXII) | ಸಂಪೂರ್ಣ |
| 17 | 1952 | X | ಅತಿಯತ್ ವಿಚಾರಣೆಗಳ ಅಧಿನಿಯಮ, 1952 (1952ರ ಹೈದ್ರಾಬಾದ್ ಅಧಿನಿಯಮ X) | ಸಂಪೂರ್ಣ |
| 18 | 1952 | XXIX | ಔಷಧ (ನಿಯಂತ್ರಣ) ಅಧಿನಿಯಮ, 1952 (1952ರ ಬಾಂಬೆ ಅಧಿನಿಯಮ XXIX) | ಸಂಪೂರ್ಣ |
| 19 | 1956 | XXXI | ಹಿಂದೂ ಸಾರ್ವಜನಿಕ ಸ್ಥಳಗಳ ಪೂಜೆ (ಅಧಿಕೃತ ಪ್ರವೇಶ) ಅಧಿನಿಯಮ, 1956 (1956ರ ಬಾಂಬೆ ಅಧಿನಿಯಮ XXXI) | ಸಂಪೂರ್ಣ |
| 20 | 1956 | XXXII | ಮರುಮಖ್ಯಾತೆಯಂ (ತೊಂದರೆಗಳ ನಿವಾರಣೆ) ಅಧಿನಿಯಮ, 1955 (1956ರ ಮದ್ರಾಸ್ ಅಧಿನಿಯಮ XXXII) | ಸಂಪೂರ್ಣ |
| 21 | 1957 | 12 | ಕರ್ನಾಟಕ ಅಸ್ತಿತ್ವದಲ್ಲಿರುವ ಕಾನೂನುಗಳು (ಮೌಲ್ಯಗಳ ಉಲ್ಲೇಖನಗಳ ನಿರ್ಮಾಣ) ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 12) | ಸಂಪೂರ್ಣ |
| 22 | 1961 | 3 | ಕರ್ನಾಟಕ ನಿರ್ವಾಸಿತ ಹಿತಾಸಕ್ತಿ (ಪ್ರತ್ಯೇಕಿಸುವ) ಪೂರಕ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 3) | ಸಂಪೂರ್ಣ |
| 23 | 1967 | 15 | ಕರ್ನಾಟಕ ನಗದು ಅನುದಾನಗಳ ರದ್ದಿಯಾತಿ ಅಧಿನಿಯಮ, 1967 (1967ರ ಕರ್ನಾಟಕ ಅಧಿನಿಯಮ 15) | ಸಂಪೂರ್ಣ |
| 24 | 1986 | 2 | ಕರ್ನಾಟಕ ಕೃಷಿ ಪತ್ತಿನ ಪಾಸು ಪುಸ್ತಕ ಅಧಿನಿಯಮ, 1984 (1986ರ ಕರ್ನಾಟಕ ಅಧಿನಿಯಮ 2) | ಸಂಪೂರ್ಣ |
| 25 | 2004 | 24 | ಕರ್ನಾಟಕ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಇಂಜಿಯರಿಂಗ್ ಕೋರ್ಸುಗಳ ಅಭ್ಯರ್ಥಿಗಳ ಆಯ್ಕೆ (ವಿಶೇಷ ಉಪಬಂಧಗಳ) ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 24) | ಸಂಪೂರ್ಣ |

| | | | | |
|---|---|---|---|---|
| 26 | 2007 | 28 | ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶಾತಿ ವಿನಿಯಮನ ಮತ್ತು ಶುಲ್ಕ ನಿಗದಿಕರಣ) (ವಿಶೇಷ ಉಪಬಂಧಗಳ) ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 28) | ಸಂಪೂರ್ಣ |
| 27 | 2011 | 23 | ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶಾತಿ ವಿನಿಯಮನ ಮತ್ತು ಶುಲ್ಕ ನಿಗದಿಕರಣ) (ವಿಶೇಷ ಉಪಬಂಧಗಳ) ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ 23) | ಸಂಪೂರ್ಣ |
| 28 | 2012 | 23 | ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶಾತಿ ವಿನಿಯಮನ ಮತ್ತು ಶುಲ್ಕ ನಿಗದಿಕರಣ) (ವಿಶೇಷ ಉಪಬಂಧಗಳ) ಅಧಿನಿಯಮ, 2012 (2012ರ ಕರ್ನಾಟಕ ಅಧಿನಿಯಮ 23) | ಸಂಪೂರ್ಣ |
| 29 | 2013 | 50 | ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶಾತಿ ವಿನಿಯಮನ ಮತ್ತು ಶುಲ್ಕ ನಿಗದಿಕರಣ) (ವಿಶೇಷ ಉಪಬಂಧಗಳ) ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ 50) | ಸಂಪೂರ್ಣ |
| 30 | 2014 | 29 | ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶಾತಿ ವಿನಿಯಮನ ಮತ್ತು ಶುಲ್ಕ ನಿಗದಿಕರಣ) (ವಿಶೇಷ ಉಪಬಂಧಗಳ) ಅಧಿನಿಯಮ, 2014 (2014ರ ಕರ್ನಾಟಕ ಅಧಿನಿಯಮ 29) | ಸಂಪೂರ್ಣ |

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಬದಲಾಗುತ್ತಿರುವ ಸಮಾಜದಲ್ಲಿ ಕಾನೂನು ಕ್ರಿಯಾಶೀಲವಾಗಿರಬೇಕು. ಕಾನೂನುಗಳು ನಿಶ್ಚಲವೂ ಅಲ್ಲ, ಶಾಶ್ವತವೂ ಅಲ್ಲ. ಈ ಹಿಂದೆ ಕಾನೂನುಗಳನ್ನು ಅಂದಿನ ಪರಿಸ್ಥಿತಿಗಳು ಅಥವಾ ಸನ್ನಿವೇಶಗಳಿಗೆ ಅನುಗುಣವಾಗಿ ಸಮಾಜದ ಅಗತ್ಯಕ್ಕೆ ತಕ್ಕಂತೆ ಅಧಿನಿಯಮಿಸಲಾಗಿರುತ್ತದೆ, ಕಾಲಾನಂತರ ಪರಿಸ್ಥಿತಿಗಳು ಅಥವಾ ಸನ್ನಿವೇಶಗಳ ಬದಲಾವಣೆಯಿಂದ ಇಂದಿನ ಸಮಾಜಕ್ಕೆ ಅಂಥ ಕಾನೂನುಗಳು ಅಪ್ರಸ್ತುತ ಅಥವಾ ಬಳಕೆಯಲ್ಲಿಲ್ಲದಂತಾಗಿವೆ.

ಕಾಲಕಾಲಕ್ಕೆ ಬದಲಾಗುತ್ತಿರುವ ಸಮಾಜೋ-ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳಿಗಾಗಿ ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ ಅಗತ್ಯ ಬದಲಾವಣೆಗಳನ್ನು ತರುವುದು ಯಾವುದೇ ಕಾನೂನಿನ ತಿದ್ದುಪಡಿ ಅಥವಾ ನಿರಸನಗೊಳಿಸುವುದರ ಮೂಲ ಉದ್ದೇಶವಾಗಿದೆ. ಶಾಸನಗಳ ದಾಖಲೆ ಪುಸ್ತಕದಿಂದ ನಿರರ್ಥಕ ಶಾಸನಗಳನ್ನು ತೆಗೆಯುವುದು ನಿರಸನಗೊಳಿಸುವುದರ ಉದ್ದೇಶವಾಗಿದೆ. ಶಾಸನಗಳನ್ನು ಜಾರಿಗೊಳಿಸುವ ಸಮಯದಲ್ಲಿ ವಿಧಾನಮಂಡಲವು ಅವುಗಳ ಅವಧಿಯನ್ನು ಪೂರ್ವನಿರ್ಧರಿಸಿದ್ದು, ಶಾಸನಗಳ ಸಂಭವನೀಯ ವಿನಾಯಿತಿಯೊಂದಿಗೆ ಅವುಗಳನ್ನು ನಿರಸನಗೊಳಿಸುವುದು ಅಗತ್ಯವಾಗಿದೆ.

ಶಾಸನವನ್ನು ತಾತ್ಕಾಲಿಕ ಅವಧಿಗೆ ಯುಕ್ತವಾಗಿ ಅಧಿನಿಯಮಿತಗೊಳಿಸಿದ ಹೊರತು, ಅವುಗಳನ್ನು ನಿರಸನಗೊಳಿಸುವ ಮೂಲಕ ನಿರರ್ಥಕಗೊಳಿಸುವವರೆಗೆ ಅಪ್ರಚಲಿತವಾಗಿ ಉಳಿದುಕೊಳ್ಳುತ್ತವೆ. ಕಾನೂನು ಅದರ ಅಸಂಗತತೆಗಳನ್ನು ತೊಡೆದುಹಾಕಲು ಅಥವಾ ಅದರ ಉದ್ದೇಶವನ್ನು ಈಡೇರಿಸಿದ ತರುವಾಯ ಅದನ್ನು ನಿರಸನಗೊಳಿಸಲಾಗುತ್ತದೆ. ಶಾಸನಗಳ ದಾಖಲೆ ಪುಸ್ತಕದಿಂದ ನಿರರ್ಥಕ ವಿಷಯವನ್ನು ತೆಗೆದುಹಾಕಲು ಮತ್ತು ಅದರ ಪ್ರಮಾಣವನ್ನು ಕಡಿಮೆ ಮಾಡಲು ಉದ್ದೇಶಿಸುವ ಕ್ರೋಢೀಕೃತ ಪರಿಷ್ಕರಣೆಗಾಗಿ ನಿರಸನ ಮತ್ತು ತಿದ್ದುಪಡಿ ಅಧಿನಿಯಮ ರೂಪಿಸಲಾಗಿದೆ.

ಅಪ್ರಚಲಿತ ಅಥವಾ ಅಸಂಗತವಾಗಿರುವ ಕಾನೂನುಗಳನ್ನು ನಿರಸನ ಮತ್ತು ತಿದ್ದುಪಡಿ ಅಧಿನಿಯಮದ ಮೂಲಕ ಶಾಸನಗಳ ದಾಖಲೆ ಪುಸ್ತಕದಿಂದ ನಿರಸಿತಗೊಳಿಸುವುದು ಅಗತ್ಯವಾಗಿದೆ. ಪ್ರಸ್ತುತವಿರುವ ಕಾನೂನುಗಳನ್ನು ನಿರಸನಗೊಳಿಸುವ/ ತಿದ್ದುಪಡಿ ಮಾಡುವ ಕಾರ್ಯವಿಧಾನವು ಕಾನೂನು ರೂಪಿಸುವಷ್ಟೇ ಕಠಿಣದಾಯಕ ಕಾರ್ಯವಾಗಿರುತ್ತದೆ. ಈ ಸಂಬಂಧವಾಗಿ, ಯಾವುದೇ ನಿರ್ದಿಷ್ಟ ಕಾನೂನು ಶಾಸನಗಳ ದಾಖಲೆ ಪುಸ್ತಕದಲ್ಲಿ ಇಡುವುದು ಅಗತ್ಯವಾಗಿದೆಯೇ ಅಥವಾ ಅದಕ್ಕೆ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಯಾವುದೇ ತಿದ್ದುಪಡಿಯ ಅಗತ್ಯವಿದೆಯೇ ಅಥವಾ ಅದು ಅಪ್ರಚಲಿತವಾಗಿರುವುದಕ್ಕಾಗಿ ಅದನ್ನು ಒಟ್ಟಾರೆಯಾಗಿ ನಿರಸನಗೊಳಿಸುವುದು ಅಗತ್ಯವಿದೆಯೇ ಎಂಬ ಬಗ್ಗೆ ನಿಯತವಾಗಿ ಪರಿಶೀಲನೆ ಮಾಡಲಾಗುತ್ತದೆ.

ನಿರಸನ ಮತ್ತು ತಿದ್ದುಪಡಿ ಅಧಿನಿಯಮಗಳನ್ನು ಅಧಿನಿಯಮಿಸುವ ಮೂಲಕ ಎಲ್ಲಾ ಅವಧಿ ಮೀರಿದ, ಅಪ್ರಚಲಿತ ಮತ್ತು ಅನಗತ್ಯ ಅಧಿನಿಯಮಗಳನ್ನು ನಿಯತಕಾಲಿಕವಾಗಿ ನಿರಸನಗೊಳಿಸುವುದು ವಿಧಾನಮಂಡಲದ ಕಾರ್ಯವಾಗಿದೆ.

ಕರ್ನಾಟಕ ಕಾನೂನು ಆಯೋಗವು ವಿವಿಧ ಅಧಿನಿಯಮಗಳನ್ನು ಸವಿವರವಾಗಿ ಪರಿಶೀಲಿಸಿ, ತನ್ನ ಐವತ್ತೆಂಟನೇ ವರದಿಯಲ್ಲಿ ಪ್ರಸ್ತುತ ಪರಿಸ್ಥಿತಿ ಮತ್ತು ಸನ್ನಿವೇಶಗಳಲ್ಲಿ ಬಳಕೆಯಲ್ಲಿಲ್ಲವೆಂದು ಅಥವಾ ಸುಸಂಗತವಲ್ಲವೆಂದು ಕಂಡುಬಂದ ಕೆಲವು ಪ್ರಾದೇಶಿಕ ಮತ್ತು ರಾಜ್ಯ ಅಧಿನಿಯಮಗಳನ್ನು ನಿರಸನಗೊಳಿಸಲು ಪ್ರಸ್ತಾವಿಸಲಾಗಿದ್ದು, ಅವುಗಳನ್ನು ನಿರಸನಗೊಳಿಸಲು ಶಿಫಾರಸ್ಸು ಮಾಡಲಾಗಿದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಚ್.ಕೆ. ಪಾಟೀಲ್**
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 21ನೇ ಫೆಬ್ರವರಿ 2023

## KARNATAKA LEGISLATIVE COUNCIL
### ONE HUNDRED AND FIFTY SECOND SESSION

# THE KARNATAKA REPEALING OF CERTAIN ENACTMENTS AND REGIONAL LAWS BILL, 2024

**(LA Bill No. 9 of 2024)**

**(As passed by the Karnataka Legislative Assembly)**

A Bill to repeal certain enactments and Regional Laws in force in the State of Karnataka.

Whereas it is expedient to repeal certain enactments and Regional Laws in force in the State.

Be it enacted by the Karnataka State Legislature in the Seventy fifth year of the Republic of India as follows:-

**1. Short title and Commencement.-** (1) This Act may be called the Karnataka Repealing of Certain Enactments and Regional Laws Act, 2024.

(2) It shall come into force at once.

**2. Definitions.-** In this Act, unless the context otherwise requires,-

(a) “regional laws” mean laws in force in the former States of Bombay, Hyderabad, Madras and Mysore immediately before 1st November 1956, and continued in force under section 119 of the States Reorganization Act, 1956 (Central Act 37 of 1956) in the respective Areas of those States which are now part of Karnataka State; and

(b) “Schedule” means a Schedule annexed to this Act.

**3. Repeal of certain enactments and Regional Laws.-** The enactments and Regional Laws specified in the Schedule as in force in the State are hereby repealed.

**4. Savings.-** (1) The repeal by this Act of any enactment or regional laws,-

(i) shall not affect any other enactment or regional laws in which the repealed enactment or regional laws has been applied, incorporated or referred to;

(ii) shall not affect the validity, invalidity, effect or consequences of anything already done or suffered, or any right, title, obligation or liability already acquired, accrued or incurred, or any remedy or proceeding in respect thereof, or any release or discharge of or from any debt, penalty, obligation, liability, claim or demand, or any indemnity already granted, or the proof of any past act or thing;

(iii) shall not affect any principle or rule of law, or established jurisdiction, form or course of pleading, practice or procedure, or existing usage, custom, privilege, restriction, exemption, office or appointment, notwithstanding that

the same respectively may have been in any manner affirmed or recognised or derived by, in or from any enactment or regional laws hereby repealed;

(iv) shall not revive or restore any jurisdiction, office, custom, liability, right, title, privilege, restriction, exemption, usage, practice, procedure or other matter or thing not now existing or in force;

(v) shall the repeal of the Appropriation Acts by this Act affect the audit, examination, accounting, investigation, inquiry or any other action taken or to be taken in relation thereto by any authority and such audit, examination, accounting, investigation, inquiry or action could be taken and/ or continued as if the said Acts are not repealed by this Act;

(vi) nor shall the repeal of any enactment or regional laws shall affect any proceedings initiated or to be initiated under these enactments or regional laws before any court or other authority to challenge, or to enforce, the rights conferred by these enactments or regional laws and those proceedings shall be continued and disposed off in accordance with these enactments or regional laws as if the said enactments or regional laws are not repealed by this Act.

(2) For the removal of doubts it is hereby declared that where this Act repeals any enactment by which,-

(i) the text of any other enactment or regional laws, was amended by the express addition, omission, insertion or substitution of any matter, the repeal shall not affect the continuance of any such amendment made by the enactment or regional laws so repealed and in operation at the commencement of this Act ;

(ii) any action taken (including any rule or order or bye-law or regulation made or any tax or cess or fee assessed or collected) by the Government or any other authority has been validated or saved or proceedings before one authority has been transferred to another authority or any declaration has been made or any direction has been given, the repeal shall not affect the operation of such validation or saving or transfer or declaration or direction and in operation at the commencement of this Act; and

(iii) any other enactment or regional laws has been amended or repealed or extended to the State of Karnataka, with or without some consequential or transitory or saving provisions the repeal shall not affect the operation of such amendment, repeal, extension or provision and in operation at the time of commencement of this Act.

(3) The provisions of section 6, 8 and 24 of the Karnataka General Clauses Act, 1899 (Karnataka Act III of 1899) shall be applicable in respect of repeal of an enactment by this Act.

**Schedule**
**Repealed Enactments**
**(See sections 2 and 3)**

| SL No. | Year | Act No. | Short Title | Extent of Repeal |
|---|---|---|---|---|
| **(1)** | **(2)** | **(3)** | **(4)** | **(5)** |
| 1. | 1350 F | XIX | State Bank Act, 1350 F (Hyderabad Act XIX of 1350 F) | The whole |
| 2. | 1381F | III c | Dissolved Special Tribunal (Issue of Warrants) Regulation 1359 F (Hyderabad Act III c. 1381 F) | The whole |
| 3. | 1368F | LXIX | Abolition of Jegirs Regulations 1958F (Hyderabad Regulation LXIX of 1368F) | The whole |
| 4. | 1871 | XXII | Pension Act, 1871 (Mysore Act, XXII of 1871) | The whole |
| 5. | 1906 | II | Tramways Act, 1906 (Mysore Act II of 1906) | The whole |
| 6. | 1932 | XXII | Marumakkattayam Act, 1932 (Madras Act XXII of 1932) | The whole |
| 7. | 1933 | X | Hindu Laws Women's Rights Act, 1933 (Mysore Act X of 1933) | The whole |
| 8. | 1933 | XXI | Nambudari Act, 1932(Madras Act XXI of 1933) | The whole |
| 9. | 1938 | IV | The Bombay Provisional Collection of Taxes Act, 1938 (Bombay Act IV of 1938) | The whole |
| 10. | 1939 | XIV | Transfer of property and the Indian Registration (Bombay Amendment) Act, 1939 (Bombay Act XIV of 1939) | The whole |
| 11. | 1943 | I | Cutchi Memons Act, 1943 (Mysore Act I of 1943) | The whole |
| 12. | 1947 | V | Temple Entry Authorization Act 1947 (Madras Act, V of 1947) | The whole |
| 13. | 1949 | VIII | Vexatious Litigation Act, 1949(Madras Act VIII of 1949) | The whole |
| 14. | 1949 | XXX | Drugs (Control) Act, 1949 (Madras Act XXX of 1949) | The whole |

| | | | | |
|---|---|---|---|---|
| 15. | 1950 | V | Drugs (Control) Act, 1950 (Mysore Act V of 1950) | The whole |
| 16. | 1951 | XXXII | The Mysore Transfer of Property (Extension to Agricultural Land) Act, 1951 (Mysore Act XXXII of 1951) | The whole |
| 17. | 1952 | X | Atiyat Enquiries Act, 1952 (Hyderabad Act X of 1952) | The whole |
| 18. | 1952 | XXIX | Drugs (Control) Act, 1952 (Bombay Act XXIX of 1952) | The whole |
| 19. | 1956 | XXXI | Hindu Places of Public worship (Entry Authorization) Act, 1956 (Bombay Act XXXI of 1956) | The whole |
| 20. | 1956 | XXXII | Marumakkattayam (Removal of Doubts) Act, 1955 (Madras Act XXXII of 1956) | The whole |
| 21. | 1957 | 12 | The Karnataka Existing Laws (Construction of References of values) Act, 1957 (Karnataka Act 12 of 1957) | The whole |
| 22. | 1961 | 3 | The Karnataka Evacuee Interest (Separation) Supplementary Act, 1961 (Karnataka Act 3 of 1961) | The whole |
| 23. | 1967 | 15 | The Karnataka Abolition of Cash Grants Act, 1967 (Karnataka Act 15 of 1967) | The whole |
| 24. | 1986 | 2 | The Karnataka Agricultural Credit Pass Book Act, 1984 (Karnataka Act 2 of 1986) | The whole |
| 25. | 2004 | 24 | The Karnataka Selection of candidates for admission to Medical, Dental and Engineering courses (Special Provisions) Act, 2004 (Karnataka Act 24 of 2004) | The whole |
| 26. | 2007 | 28 | The Karnataka Professional Educational Institutions (Regulation of admission and fixation of fee) (Special Provisions) Act, 2007 (Karnataka Act 28 of 2007) | The whole |
| 27. | 2011 | 23 | The Karnataka Professional Educational Institutions (Regulation of admission and fixation of fee) (Special Provisions) Act, 2011 (Karnataka Act 23 of 2011) | The whole |
| 28. | 2012 | 23 | The Karnataka Professional Educational Institutions (Regulation of admission and fixation of fee) (Special Provisions) Act, 2012 (Karnataka Act 23 of 2012) | The whole |

| | | | | |
|---|---|---|---|---|
| 29. | 2013 | 50 | The Karnataka Professional Educational Institutions (Regulation of admission and fixation of fee) (Special Provisions) Act, 2013 (Karnataka Act 50 of 2013) | The whole |
| 30. | 2014 | 29 | The Karnataka Professional Educational Institutions (Regulation of admission and fixation of fee) (Special Provisions) Act, 2014 (Karnataka Act 29 of 2014) | The whole |

**STATEMENT OF OBJECTS AND REASONS**

**(As appended to at the time of introduction)**

In a changing society law must be dynamic. Laws are neither stagnant nor permanent. The laws which have been enacted in the past to suit the need of the society according to the then existing situations or circumstances, over the years may cease to be useful for the present day society due to change in situations or circumstances, thus rendering such laws as irrelevant or obsolete.

The primary object of any amendment or repeal of law is to bring necessary changes in the existing law for the changing socio-economic and cultural conditions from time to time. The object of repeal is to excise dead statutes from statute book. There is a need to repeal statutes with a possible exception of those statutes whose life is predetermined by the Legislature at the time of their enactment.

A Statute unless it is expressly enacted for a temporary period, survives until it is killed by way of repeal as obsolete. Generally, Law is repealed either to remove inconsistencies or after it has served its purpose. Repealing or Amending Act are designed for editorial revision which intends to remove the dead matter from the statute book and to reduce its volume.

The laws which have become obsolete or irrelevant need to be repealed from the statute book by Repealing and Amending Act. The process of repealing/amending existing laws is as equally an arduous task as law-making. In this regard, a regular exercise has to be undertaken to check whether any particular law needs to be kept on statute book or is there any need to amend it fully or partially or to repeal it totally for having become obsolete.

It is a practice of the Legislature to repeal all spent, obsolete and unnecessary Acts periodically by enacting Repealing and Amending Acts.

On the detailed examination of various Acts, the Law Commission of Karnataka in its fifty eighth report has proposed to repeal certain Regional and State Acts which are found to be not useful or relevant for the present situations or circumstances as such they are recommended to be repealed as obsolete.

Hence, the Bill.

## FINANCIAL MEMORANDUM

There is no extra expenditure involved in the proposed legislative measures.

**H.K.PATIL**
Minister for Law, Justice and
Human Rights, Parliamentary Affairs
and Legislation and Tourism.

**K.R. MAHALAKSHMI**
Secretary
Karnataka Legislative Council

Govt. Press, Vikasa Soudha, Bengaluru, 21st Feb, 2024, P7, W.D. , Copies 300